'ದುರ್ಗಾಸ್ತಮಾನ' ಕಾದಂಬರಿ ಬರೆದು ಮುಗಿಸಿ ಆಮೇಲೆ ಮತ್ತೆ ಆಸ್ಪತ್ರೆಗೆ ಹೋಗಿ ಮಲಗಿಕೊಂಡರು!

ತ.ರಾ.ಸು ಅವರ 'ಬದುಕುಬರಹ' ಹಾಗೂ ಸಂಸ್ಮರಣ ಗ್ರಂಥದ ಸಂಪಾದಕತ್ವವನ್ನು ನಿರ್ವಹಿಸಿದ ಹೆಮ್ಮೆ ನನ್ನದು.

ಬೀಚಿಯವರು ಇಂಗ್ಲಿಷ್ ಸಾಹಿತ್ಯದ ಓದನ್ನು ನಡೆಸುತ್ತಿದ್ದ ಕಾಲದಲ್ಲಿ ಅನಿರೀಕ್ಷಿತವಾಗಿ ಅವರು ಅ.ನ.ಕೃ. ಸಾಹಿತ್ಯದ ಕಡೆಗೆ ಸೆಳೆಯಲ್ಪಟ್ಟರು. ಆ ಘಟನೆಯನ್ನು ಅವರು ತಮ್ಮ ಆತ್ಮಕಥನದಲ್ಲಿ ಉಲ್ಲೇಖಿಸಿದ್ದಾರೆ. ಸರಕಾರಿ ನೌಕರಿಯಲ್ಲಿದ್ದ ಬೀಚಿಯವರಿಗೆ ಹುಬ್ಬಳ್ಳಿಗೆ ವರ್ಗಾವಣೆಯಾದಾಗ ಅವರ ಪತ್ನಿ ಸಮಯ ಕಳೆಯಲು ಕನ್ನಡ ಪುಸ್ತಕ ತಂದುಕೊಡುವಂತೆ ಅವರಲ್ಲಿ ಕೇಳಿದ್ದರಂತೆ. ಹುಬ್ಬಳ್ಳಿಯ 'ಸಾಹಿತ್ಯ ಭಂಡಾರ'ಕ್ಕೆ ಹೋದ ಬೀಚಿಯವರು ಕನ್ನಡದ ಯಾವುದಾದರೂ ಪುಸ್ತಕವನ್ನು, ಅದು ರೈಲ್ವೆ ಗೈಡ್ ಆದರೂ ಪರವಾಗಿಲ್ಲ ಕೊಡುವಂತೆ ಕೇಳಿದ್ದಾರೆ. ಹೀಗೆ ಕೊಂಡು ತಂದ ಪುಸ್ತಕವನ್ನು ಅವರ ಪತ್ನಿ ಓದಿ ಭಾವಾವೇಶ ಹೊಂದಿರುವುದನ್ನು ನೋಡಿ ಬೀಚಿಯವರು ಕುತೂಹಲದಿಂದ ಆ ಪುಸ್ತಕವನ್ನು ಓದುತ್ತಾರೆ. ಆ ಪುಸ್ತಕ ಅವರ ಮೇಲೆ ಎಷ್ಟು ಪ್ರಭಾವ ಬೀರಿತೆಂದರೆ ಆಮೇಲೆ ಅವರು ಕನ್ನಡದಲ್ಲಿ ಬರೆಯಲು ಪ್ರಾರಂಭಿಸುತ್ತಾರೆ ಹಾಗೂ ಆ ಗ್ರಂಥದ ಲೇಖಕರನ್ನು ಗುರುಸ್ಥಾನದಲ್ಲಿಟ್ಟು ಗೌರವಿಸುತ್ತಾರೆ. ಅವರ ಮೇಲೆ ಪ್ರಭಾವ ಬೀರಿದ ಆ ಪುಸ್ತಕ ಅ.ನ.ಕೃ. ಅವರ 'ಸಂಧ್ಯಾರಾಗ' ಕಾದಂಬರಿ. ಹೀಗೆ ಅ.ನ.ಕೃ. ಅವರೊಂದಿಗೆ ಒಡನಾಟವಿದ್ದ ಬೀಚಿಯವರು ನನಗೂ ಪರಿಚಯವಾಗಿ ಆಮೇಲೆ ನಾನು ಅವರ ಗೌರವ ಗ್ರಂಥ 'ತಿಂಮದರ್ಶನ'ದ ಸಂಪಾದಕನಾದೆ. ಅವರ ಜೀವನ ಚರಿತ್ರೆಯನ್ನೂ ಪ್ರಕಟಿಸಿದ್ದೇನೆ.

- **ಹೊರನಾಡಿನಲ್ಲಿ ಅಂದರೆ ಗೋವಾದಲ್ಲಿ ನೆಲೆಸಿ ಕನ್ನಡವನ್ನು ಉಳಿಸಿ ಬೆಳೆಸುವ ಕಾರ್ಯ ನಡೆಸಿದವರಲ್ಲಿ ನೀವೂ ಒಬ್ಬರು. ಈ ಕಾರ್ಯವನ್ನು ಯಾವ ರೀತಿಯಿಂದ ನಡೆಸಿದ್ದಿರಿ. ಇದಕ್ಕೆ ನಿಮಗೆ ಏನಾದರೂ ಅಡೆತಡೆಗಳು ಬಂದಿರುವುದು ಇದೆಯೇ?**

